ಶ್ರೀ ಬಿ.ಎ. ಮೊಯ್ದೀನ್:- ಮಾನ್ಯ ಅಧ್ಯಕ್ಷರೇ, ಶೆಡ್ಡುಗಳ ವಿವರ ಈಗಾಗಲೇ ನಾನು ಒದಗಿಸಿದ್ದೇನೆ. ಮತ್ತೇ ಈ 37 ನಿವೇಶನಗಳು ಏನು ಇದೆ ಅದರಲ್ಲಿ ಒಂದನ್ನು ಮಾತ್ರ ನಾವು ಇಲ್ಲಿಯವರೆಗೂ ಕೊಟ್ಟಿದ್ದೇವೆ. ಬಾಕಿ ಇರತಕ್ಕಂಥ ನಿವೇಶನ ಯಾವುದೂ ಕೊಟ್ಟಿಲ್ಲ.

ಶ್ರೀ ಟಿ.ಎಚ್. ಬಸವರಾಜು:- ಯಾರಿಗೆ ಕೊಟ್ಟಿದ್ದೀರಿ, ಅವರ ಹೆಸರು ಹೇಳಿ.

ಶ್ರೀ ಬಿ.ಎ. ಮೊಯ್ದೀನ್:- ಒಂದು ಶೆಡ್ಡನ್ನು ಕೈಗಾರಿಕಾ ಚಟುವಟಿಕೆಗೆ ಕೊಟ್ಟಿದ್ದೇವೆ. ಸಿಮೆಂಟ್ ಪೈಪ್ ಮಾಡುವುದಕ್ಕೆ ಕೊಟ್ಟಿದ್ದೇವೆ. ಅವರ ಹೆಸರು ನನಗೆ ಗೊತ್ತಿಲ್ಲ.

ವಿಷಯ:- ಹಳೆಯಂಗಡಿ, ಪಡುಪಣಂಬೂರ್ ಹಾಗೂ ಕಿಲ್ಪಾಡಿ ಪಂಚಾಯಿತಿಗಳಿಗೆ ನೀರು ಪೂರೈಕೆ.

279 (2132) ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯ ಜೊತೆ ಹಳಿಯಂಗಡಿ ಪಡುಪಣಂಬೂರ್, ಕಿಲ್ಪಾಡಿ ಈ ಮೂರು ಪಂಚಾಯಿತಿಗಳೂ ಮಂಗಳೂರು ನಗರ ಕಾರ್ಪೋರೇಷನ್ನಿಗೆ ಸೇರಿಸುವುದರಿಂದ ತುಂಬೆ ನೀರು ಸರಬರಾಜು ಯೋಜನೆಯಲ್ಲಿ ಸದರಿ ಗ್ರಾಮಗಳಿಗೂ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ?

ಆ) ಈ ಯೋಜನೆಗೆ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆಯೇ? ಆಗಿದ್ದರೆ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಅಲ್ಲಿಯ ಜನರಿಗೆ ಈ ನೀರಿನ ಬವಣೆಯನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಈ ಬಗ್ಗೆ ಒಂದು ಸಮಗ್ರ ಯೋಜನೆಯನ್ನು ರೂಪಿಸಬೇಕಾಗಿದೆ. ನಂತರ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಆ) ಇಲ್ಲ, ಸರ್ಕಾರವು ಮುಲ್ಕಿಯ ಜೊತೆ ಹಳಿಯಂಗಡಿ, ಪಡುಪಣಂಬೂರ್ ಮತ್ತು ಕಿಲ್ಪಾಡಿ ಪಂಚಾಯಿತಿಗಳನ್ನು ತನ್ನ ಆದೇಶ ಸಂಖ್ಯೆ: ವನ್ಇ 260 ಎಂಎಲ್ಆರ್ ದಿನಾಂಕ: 16-10-1995 ರಲ್ಲಿ ಸೇರಿಸಲ್ಪಟ್ಟಿದೆ. ಈ ಎಲ್ಲಾ ಪ್ರದೇಶಗಳನ್ನು ಸೇರಿಸಿ, ಒಂದು ಸಮಗ್ರ ನೀರು ಸರಬರಾಜು ಯೋಜನೆಯನ್ನು ತಯಾರಿಸಲು, ಈಗಾಗಲೇ ಮಂಗಳೂರು ಮಹಾನಗರ ಪಾಲಿಕೆಯವರು ಮೆ: ಟಾಟಾ ಕನ್ಸಲ್ಟೆಂಟ್ ಜೊತೆ ಒಪ್ಪಂದ ಮಾಡುವ ಹಂತದಲ್ಲಿದೆ. ಈ ಮಧ್ಯೆ ಈ ಪ್ರದೇಶಗಳಿಗೆ ತುಂಬೆಯಿಂದ ನೀರು ಸರಬರಾಜು ಮಾಡಲು ಸರ್ವೆ ಕೆಲಸ ಮುಗಿಸಿ ಪ್ಲಾನ್ ಮತ್ತು ಅಂದಾಜನ್ನು ಮಾಡುವ ಕೆಲಸವನ್ನು ಮುಗಿಸುವ ಹಂತದಲ್ಲಿದೆ. ಶೀಘ್ರದಲ್ಲಿ ಮಹಾನಗರ ಪಾಲಿಕೆಗೆ ಅಂದಾಜು ಪಟ್ಟಿಗಳಿಗೆ ಮೇಲುರುಜು ಮಾಡಲು ಮತ್ತು ಹಣಕಾಸಿನ ವ್ಯವಸ್ಥೆ ಮಾಡಲು ಕಳುಹಿಸಲಾಗುವುದು.

ಶ್ರೀ ಕೆ. ಅಮರನಾಥಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಮುಲ್ಕಿಯಲ್ಲಿ ಈಗಾಗಲೇ ಹಳೆಯಂಗಡಿ ಮತ್ತು ಕಿಲ್ಪಾಡಿ ಮತ್ತು ಪಡುಪಣಂಬೂರು ಈ ಪಂಚಾಯಿತಿಗಳನ್ನು ಮತ್ತು ಪುರಸಭೆಯನ್ನು ಮಹಾನಗರಪಾಲಿಕೆಗೆ ಸೇರಿಸಿದ್ದಾಗಿದೆ. ಅಲ್ಲಿ ಸಮುದ್ರ ಬೇರೆ ಇರುವುದರಿಂದ ಅಲ್ಲಿ ತೆಗೆಯುವಂತಹ ಬೋರ್ ವೆಲ್‌ಗಳು ಆಗಲಿ, ಓಪನ್ ವೆಲ್‌ಗಳು ಆಗಲಿ ಉಪ್ಪು ನೀರಿನಿಂದ ಕೂಡಿರುವುದರಿಂದ ನೀರಿನ ವ್ಯವಸ್ಥೆಯನ್ನು ಮಾಡಲು ತುಂಬಾ ಕಷ್ಟವಾಗಿ ಸುಮಾರು ಎರಡು ಮೂರು ವರ್ಷಗಳಿಂದ ಟ್ಯಾಂಕರ್‌ಗಳಿಂದ ನೀರು ಕೊಡುವಂತಹ ವ್ಯವಸ್ಥೆ ಇದೆ. ಆದೇ ತರಹ ಇವತ್ತು ಮುಕ್ಕಾವರಿಗೆ ಬಂದಿರುವಂತಹ ಮಂಗಳೂರಿಗೆ ತುಂಬೆಯಿಂದ ಬಂದಿರುವಂತಹ ನೀರನ್ನು 4 ಕಿಲೋಮೀಟರ್ ಉದ್ದಕ್ಕೆ ಪೈಪ್‌ಲೈನ್ ಹಾಕಿ ಮುಲ್ಕಿಯವರಿಗೆ ನೀರನ್ನು

1.10 ಪಿ.ಎಂ

ಬೇಸಿಗೆ ಕಾಲ ಬರುವ ಮುನ್ನಾ ವಿಸ್ತರಿಸುತ್ತೀರಾ ಎಂದು ಕೇಳುತ್ತಿದ್ದೇನೆ. ಇನ್ನೊಂದು ನನ್ನ ಕ್ಷೇತ್ರವಾದ ಮೂಡುಬಿದರೆಯಲ್ಲಿ ನೀರಿನ ಪ್ರಾಬ್ಲಮ್ ಇರುವುದರಿಂದಾಗಿ, ನೀರು ಒದಗಿಸುವ ಕೆಲಸವನ್ನು ಬೇಸಿಗೆ ಕಾಲ ಬರುವುದಕ್ಕಿಂತ ಮುಂಚೆ ಮಾಡಿಕೊಡಲಾಗುತ್ತದೆಯೇ ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಮೂಲ್ಕಿ ಪುರಸಭೆ, ಹಳೆಅಂಗಡಿ, ಕುಲೆವಾಡಿ, ಪಣಂಬೂರು ಈ ನಾಲ್ಕು ಗ್ರಾಮಗಳು 1995ರಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿವೆ. ಅದಕ್ಕೂ ಮುಂಚೆ ಜಿಲ್ಲಾ ಪಂಚಾಯಿತಿಗಳು ಕುಡಿಯುವ ನೀರನ್ನು ತೆರೆದ ಬಾವಿಗಳು ಮತ್ತು ಬೋರ್‌ವೆಲ್‌ಗಳ ಮೂಲಕ ಒದಗಿಸುತ್ತಿದ್ದೆವು. ಈ ಗ್ರಾಮಗಳಿಗೆ ತುಂಬೆ ನದಿ ಮೂಲದಿಂದ ನೀರನ್ನು ಒದಗಿಸಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅಲ್ಲಿಂದ 4 ಕಿಲೋ ಮೀಟರ್ ಪೈಪ್ ಲೇನ್ ಹಾಕಿ ನೀರು ಒದಗಿಸುವ ಯೋಜನೆಯನ್ನು ಈಗಾಗಲೇ ಮಾಡಲಾಗಿದೆ. ಆ ಕೆಲಸವನ್ನು ನಾವು ಮಾಡಿಕೊಡುತ್ತೇವೆ. ಆಮೇಲೆ ಅವರ ಕ್ಷೇತ್ರವಾದ ಮೂಡಬಿದ್ರೆಗೆ ನೀರು ಕೊಡುವ ವಿಚಾರವನ್ನೂ ಕೇಳಿದ್ದಾರೆ. ಅದು ನೇತ್ರಾವತಿಯಿಂದ ಮೂಡತಕ್ಕಂಥ ಕಾರ್ಯ. ವಿಶ್ವಬ್ಯಾಂಕ್ ಯೋಜನೆ ಮೂಲಕ ಮಾಡುವ 40 ಯೋಜನೆಗಳಲ್ಲಿ ಇದೂ ಒಂದನ್ನು ಸೇರಿಸಿ ಕೆಲಸ ಮಾಡಿಕೊಡಲಾಗುತ್ತದೆ. ಇದರ ಜೊತೆಗೆ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯೊಳಗೆ ಹಲವಾರು ಗ್ರಾಮಗಳನ್ನು ಸೇರಿಸಿರುವುದನ್ನು ಮಂಗಳೂರು ನಗರ ಶಾಸಕರುಗಳು ಈ ಮನೆಯಲ್ಲೂ ಹಾಗೂ ಮೇಲ್ಮನೆಯಲ್ಲೂ ಬೇಡ ಎಂದು ಹೇಳಿದ್ದಾರೆ. ಇದರ ಬಗ್ಗೆ ಪೌರಾಡಳಿತ ಸಚಿವರು ಮತ್ತು ನಾನೂ ಕೂತು ಯಾವ ಯಾವ ಗ್ರಾಮಗಳನ್ನು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ತೆಗೆಯಬೇಕೆಂಬ ಬಗ್ಗೆ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.